"ಅಕ್ಕಾರs, ಲಗೂನ ಬರಬೇಕ್ರಿ ಹೊರಗ, ತಾಜಾ ಅದ ಬೆಣ್ಣಿ ಕೈ ಬಿಸಿಗೆ ಕರಗಿ ಹೋದೀತ್ರಿ ಮತ್ತ'' ಯಶೋದೆಯ ನಿತ್ಯದ ಕೂಗಿಗೆ ಗಡಬಡಿಸಿ ಹೊರ ನಡೆದಿದ್ದೆ. ಕಾಲು ಕೆ.ಜಿ ಗಟ್ಟಿ ಚೆಂಡಿನಂತಹ ಬೆಣ್ಣೆ, ಅರ್ಧ ಲೀಟರ ಹಾಲು ಹಾಕಿಸಿಕೊಂಡೊಡನೆ ತನ್ನ ಚಂಚಿ ಚೀಲದಿಂದ ಎರಡು ತಾಜಾ ಗಿಳಿ ಹಸಿರು ಬಣ್ಣದ ಅಂಬಾಡಿ ಎಲೆ ತೆಗೆದು ಚೂರೇ ಚೂರು ಸುಣ್ಣ ಸವರಿ ನನ್ನತ್ತ ಸರಿಸಿದ್ದಳು –''ಊಟ ಆದ ಮ್ಯಾಲೆ ತಿನ್ರಿ ಅಕ್ಕಾರ ಪಚನ ಛಲೋ ಆಗ್ತೈತ್ರಿ'' ಎಂದು. ತಾನು ಮಾತ್ರ ದಪ್ಪ ಎರಡು ಕರಿ ಎಲೆಗೆ ಹುಣಸೆ ಬೀಜದಷ್ಟು ಸುಣ್ಣ ತಿಕ್ಕಿ ಅರ್ಧ ಹೋಳು ಕಲ್ಲಡಕಿ ಹಾಕಿ ದವಡೆಗೆ ಒತ್ತರಿಸಿದ್ದಳು. ಕರಿ ಎಲೆಯ ಘಾಟಿನ ರಸ ಹರಿದಂತೆ ಮಾತಿನ ಹುಕಿ ಮೂಡಿ ಬಂದಿತ್ತು.

"ಅಕ್ಕಾರs ಇಂದು ಎದ್ದ ಘಳಿಗಿ ನೆಟ್ಟಗಿಲ್ಲ ನೋಡ್ರಿ ಮುಂಜಾನೆ ಏಳೋ ಪುರುಸೊತ್ತ ಇಲ್ಲದ ಹಟ್ಟ್ಯಾಗಿಂದ ಒಂದs ಸಮ ನಮ್ಮ ಕಾವೇರಿ, ಅದsರಿ ನಮ್ಮ ಕರೆಯೋ ಆಕಳ ಒದರಾಕತ್ತೈತ್ರಿ. ಯಾಕಂತ ನೋಡಿದ್ರ ಕರಗೋಳೆರಡೂ ಗೂಟಾ ಬಿಚಕೊಂಡ ಓಡಿಹೋಗ್ಯಾವ್ರಿ, ಹೋಗೂ ಮುಂದ ಸುಮ್ನ ಹೋಗಬೇಕೋ ಬ್ಯಾಡೋ ಬೇಲಿಗೆ ಹಚ್ಚಿದ್ದ ಸವತಿ ಬಳ್ಳಿ ಎಲ್ಲಾ ಖಾಲಿ ಮಾಡಿ ಹೋಗ್ಯಾವ, ಸುಮಾರು ಐವತ್ತು ಕಾಯಿ ಬಿಟ್ಟಿದ್ದುವ…'' ಅವಳ ಮಾತು ಮುಗಿಯುವ ಮುನ್ನ ಲೊಚಗುಟ್ಟಿದ್ದೆ ನಾನು, "ಪಾಪ ಕಾಯಿ ಎಷ್ಟು ಲುಕ್ಸಾನಾತಲ್ಲ ಯಶೋದಾ…"

''ಅಯ್ಯ ಬೆಂಕಿ ಹಾಕ್ರಿ ಲುಕ್ಸಾನಿಗೆ ಅಕ್ಕಾರ, ತಿಂಗಳು ತುಂಬದ ಕರಗೋಳ್ರಿ ಎರಡೂ; ಪಚನ ಆದೀತ್ರೀ ಅಷ್ಟು ಕಾಯಿ? ಮೂಕ ಪ್ರಾಣಿಗಳು, ಹೊಟ್ಟಿ ಬ್ಯಾನಿ ಹೇಳಕೊಳ್ಳಲಾಕ ಬಾಯರೇs ಎಲ್ಲೈತ್ರಿ? ಹುಡುಕ್ಯಾಡಿ ಕರಕೊಂಡು ಬಂದಾಗಿನಿಂದ ಜಿಗಿದಾಡೋ ಜೀವಗಳು ಪಾಪ ಮಬ್ಬಾಗಿ ಬಿದ್ದಕೊಂಡು ಬಿಟ್ಟಾವ. ಅದಕ್ಕ ಲಗೂನ ಹಾಲು ಹಾಕಿ ಹೋಗಿ ಸಂಜೀಕ ದನದ ಡಾಕ್ಟರ ಹತ್ರ ಒಯ್ತೇನ್ರಿ.'' ಅವಳ ಅಂತಃಕರಣ ಹೀಗೆಯೇ ಬಲು ವಿಶಿಷ್ಟ. ನೇರವಾಗಿ ಎದೆ ತಟ್ಟುವ ಅವಳ ಮಾತು ಕೇಳುವಾಗ ಮನಕ್ಕೆ ಏನೋ ಹಿಗ್ಗು, ಬಟ್ಟ ಬಯಲಲ್ಲಿ ನಿಂತು ಸ್ವಚ್ಛ ಗಾಳಿ ಒಳಗೆಳೆದುಕೊಂಡಂತಹ ನಿರಾಳತೆ ನನಗೆ.

ಯಶೋದೆಗೂ ಹಾಲಿಗೂ ಯಾವ ಜನ್ಮಾಂತರದ ನಂಟೋ. ನಮ್ಮ ಬ್ಯಾಂಕಿನ ಕಾಲೋನಿಗೆ ಆರು ವರ್ಷಗಳಿಂದ ಹಾಲು ಹಾಕುತ್ತಿದ್ದಾಳೆ ಅವಳು. ನವಲೂರಿಂದ ಹೊರಡುವ ಮುಂಜಾನೆಯ ಮೊದಲ ಬಸ್ ಏರುವ ಅವಳು ಎಲ್ಲಾ ಮನೆಗಳಿಗೆ ಹಾಲು ಹಾಕಿದ ಮೇಲೆಯೇ ತನ್ನ ನಾಷ್ಟಾ ಮಾಡುವುದು; ಎರಡು ಬಿಳಿ ಜೋಳದ ಭಕ್ಕರಿ ಮ್ಯಾಲ ಗುರೆಳ್ಳ ಪುಡಿ ಹಾಕಿಕೊಂಡು ಉಳ್ಳಾಗಡ್ಡಿ ಕಡಕೊಂಡು ತಿಂದು ಮುಗಿಸಿದಳೆಂದರೆ ಅದೇ ಅವಳ ನಾಷ್ಟಾ ಊಟ ಎಲ್ಲ. ಸಾಯಂಕಾಲದ ತನಕ ಮತ್ತೊಂದು ಬುಟ್ಟಿ ತುಂಬ ತಂದ ಪೇರಲವೋ ನೇರಳೆಯೋ ಇಲ್ಲಾ ನವಲೂರಿನ ಪ್ರಸಿದ್ಧ ಕಲಮಿ ಮತ್ತು ಆಪೂಸು ಮಾವುಗಳೋ ಒಟ್ಟು ಆಯಾ ಋತುವಿಗನುಸಾರವಾಗಿ ತೋಟದಲ್ಲಿ ಬೆಳೆದ ಫಲಗಳನ್ನು ಪೇಟೆಯಲ್ಲಿ ಮಾರಾಟ ಮಾಡಿ ಹೋಗುವ ಕಷ್ಟಜೀವಿ. ನಾಲ್ಕು ವರ್ಷಗಳ ಹಿಂದೆ ಪತಿ ರವಿ ಸ್ಟೇಟ್ ಬ್ಯಾಂಕ್ ಬ್ರ್ಯಾಂಚ್ ಮ್ಯಾನೇಜರ ಆಗಿ ಬಡ್ತಿ ಹೊಂದಿ ತುಮಕೂರಿನಿಂದ ಧಾರವಾಡಕ್ಕೆ ವರ್ಗಾವಣೆ ಆಗಿ ಬಂದಾಗಿನಿಂದ ಯಶೋದೆ ಹಾಕುವ ಹಾಲು ಮೊಸರೇ ನಮ್ಮ ಮನೆಯಲ್ಲಿ. ದುಂಡು ಮುಖದ ಫಳಫಳ ಹೊಳೆವ ಕಂಗಳ ಶ್ಯಾಮಲ ವರ್ಣದ ಯಶೋದೆಯನ್ನು ಕಂಡಾಗ ಅರಳಿದ ಕಾಡುಹೂವೊಂದನ್ನು ಕಂಡಂತಾಗಿತ್ತು ನನಗೆ. ಬಿಗಿಯಾದ